ಮೂಲ ದಾವಾ ನಂಃ 108/2019

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **15-06-2024** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ವಿ.ಎ ವಕೀಲರಿಂದಃ**

ಸರ್ವೇ ನಂಬರ್ 289 ಹಿಸ್ಸಾ 3 ಕ ಕ್ಷೇತ್ರ 1 ಎಕರೆ 11 ಗುಂಟೆ ಸ್ಥಳವು ಪ್ರತಿವಾದಿಗೆ ಸಂಬಂಧಿಸಿದೆ. ದಾವಾ ಸ್ಥಳದ ಪಶ್ಚಿಮ ದಿಕ್ಕಿಗೆ ಪ್ರತಿವಾದಿಯ ಸ್ಥಳ ಬರುತ್ತದೆ ಎಂದರೆ ಸರಿ. ದಾವಾ ಸ್ಥಳವು ನನ್ನ ತಂದೆಯಿಂದ ನನಗೆ ಬಂದಿದೆ. ದಾವಾ ಸ್ಥಳದಲ್ಲಿ ನಾವು 2018 ನೇ ಸಾಲಿನಲ್ಲಿ ಆರ್.ಸಿ.ಸಿ ಮನೆಯನ್ನು ಕಟ್ಟಿಸಿದ್ದೇವೆ . ಸದರಿ ಮನೆಯನ್ನು ಕಟ್ಟಿಸಲು ಪಟ್ಟಣ ಪಂಚಾಯತದಿಂದ ಅನುಮತಿಯನ್ನು ಪಡೆದಿದ್ದೇವೆ , ಹಾಗೂ ಸದರಿ ಅನುಮತಿ ಪತ್ರ ನನ್ನ ಹತ್ತಿರ ಇದ್ದು, ಅದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ದಾವಾ ಸ್ಥಳದ ಸರ್ವೇಯನ್ನು ಮಾಡಿಸಿದ್ದು ಅದರ ನಕಾಶೆಯ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇವೆ. ದಾವಾ ಸ್ಥಳದ ಪಶ್ಚಿಮ ಗಡಿಯಿಂದ 2 ಫೂಟ್ ಅಂತರವನ್ನು ಬಿಟ್ಟು ನಾನು ನನ್ನ ಮನೆಯ ಗೋಡೆಯನ್ನು ಕಟ್ಟಿಸಿದ್ದೇನೆ. ನಮ್ಮ ಮನೆಯ ಗೋಡೆಯ 2 ಫೂಟ್ ಅಂತರವನ್ನು ಬಿಟ್ಟು ಪ್ರತಿವಾದಿಯ ಹಳೆಯ ಮನೆಯ ಗೋಡೆ ಇದೆ. ನನ್ನ ಮನೆಯ ಗೋಡೆಯು ಪಶ್ಚಿಮ ಗಡಿಯಿಂದ 2 ಫೂಟ್ ದೂರದಲ್ಲಿರುವ ಬಗ್ಗೆ ನಾನು ನ್ಯಾಯಾಲಯದ ಮುಂದೆ ಫೋಟೋಗಳನ್ನು ಹಾಜರುಪಡಿಸಿದ್ದೇನೆ.

ನಿಪಿ.4 ರಲ್ಲಿ ಕಾಣುವ ಸುಣ್ಣದ ಗೋಡೆಯನ್ನು ತೋರಿಸಿದಾಗ ಸಾಕ್ಷಿಯು ಅದು ನಮ್ಮ ಗೋಡೆ ಎಂದು ಹೇಳಿರುತ್ತಾರೆ. ನಾನು ಪಶ್ಚಿಮ ಗಡಿಯಲ್ಲಿ ಯಾವುದೇ ಕ್ಷೇತ್ರವನ್ನು ಬಿಡದೇ ನಮ್ಮ ಮನೆಯ ಗೋಡೆಯನ್ನು ಕಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು 2 ಫೂಟ್ ಜಾಗವನ್ನು ಬಿಟ್ಟು ನಮ್ಮ ಮನೆಯ ಗೋಡೆಯನ್ನು ಕಟ್ಟಿರುವುದಾಗಿ ನ್ಯಾಯಾಲಯದ ಮುಂದೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯು ನಮ್ಮ ಚಿಕ್ಕಪ್ಪನ ಮಗಳು. ಪ್ರತಿವಾದಿಯು ಸರ್ವೇ ನಂಬರ್ 289 ಹಿಸ್ಸಾ 3 ಕ ಕ್ಷೇತ್ರವನ್ನು ಖರೀದಿ ಮಾಡಿದ್ದಾರೆ. ನಾನು ಸದರಿ ಕ್ರಯ ಪತ್ರವನ್ನು ನೋಡಿದ್ದು ಇರುವುದಿಲ್ಲ. ಸದರಿ ಸ್ಥಳವನ್ನು ಖರೀದಿ ಮಾಡುವ ಕಾಲಕ್ಕೆ ಸರ್ವೇ ಮಾಡಿಸಿದ್ದಾರೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ.

ಸರ್ವೇ ನಂಬರ್ 289 ಹಿಸ್ಸಾ 3 ಕ ಕ್ಷೇತ್ರವನ್ನು ಖರೀದಿ ನಂತರ ಕಂದಾಯ ದಾಖಲೆಯಲ್ಲಿ ಪ್ರತಿವಾದಿಯ ಹೆಸರು ನಮೂದಾಗಿದೆ ಎಂದರೆ ಸರಿ. ಪ್ರತಿವಾದಿಯು ಅವಳ ಕ್ಷೇತ್ರದಲ್ಲಿ ಕಟ್ಟಡವನ್ನು ಕಟ್ಟಿದ್ದಾಳೆ , ಆದರೆ ಸೆಟ್ ಬ್ಯಾಕ್ ನ್ನು ಬಿಟ್ಟಿದ್ದು ಇರುವುದಿಲ್ಲ ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ. ಪ್ರತಿವಾದಿಯು ಕಟ್ಟಿದ ಕಟ್ಟಡದ ಸ್ಥಳದಲ್ಲಿ ಈ ಮೊದಲು ಹಳೆಯ ಕಟ್ಟಡವಿತ್ತು. ಆ ಹಳೆಯ ಮನೆಯನ್ನು ತೆರವು ಮಾಡಿ ಹೊಸ ಮನೆಯನ್ನು ಕಟ್ಟಿದ್ದಾಳೆ. ಹಳೆ ಮನೆ ಇದ್ದಂತಹ ಕ್ಷೇತ್ರದಲ್ಲಿಯೇ ಪ್ರತಿವಾದಿಯು ತನ್ನ ಹೊಸ ಮನೆಯನ್ನು ಕಟ್ಟಿದ್ದಾಳೆ ಎಂದರೆ ಸರಿ. ಹೊಸದಾಗಿ ಯಾವುದೇ ಕ್ಷೇತ್ರವನ್ನು ವಡಾಯಿಸಿದ್ದು ಇರುವುದಿಲ್ಲ.

ನಾನು ದಾವಾ ಸ್ಥಳದಲ್ಲಿ ಕಟ್ಟಿಸಿದ ಹೊಸ ಮನೆಯ ಪೂರ್ವದಲ್ಲಿ ಅಲ್ಲಿ ಹಳೆ ಮನೆ ಇತ್ತು. ನಾನು ದಾವಾ ಸ್ಥಳದಲ್ಲಿ ಹೊಸ ಮನೆಯನ್ನು ಕಟ್ಟುತ್ತಿರುವ ವೇಳೆಯಲ್ಲಿ ಪ್ರತಿವಾದಿಯು ಖರೀದಿ ಮಾಡಿದ ಸ್ಥಳದಲ್ಲಿ ಆ ಮಾಲೀಕರ ಮೂಲ ಮನೆ ಇತ್ತು ಎಂದರೆ ಸರಿ. ಆ ಸಂದರ್ಭದಲ್ಲಿ ನಮ್ಮ ಮತ್ತು ಅವರ ನಡುವೆ ಯಾವುದೇ ತೊಂದರೆ ಉದ್ಭವ ಆಗಿದ್ದು ಇರುವುದಿಲ್ಲ ,

ಹಾಗೂ ಆ ಮನೆಯಿಂದ ನಮಗೆ ಯಾವುದೇ ತೊಂದರೆ ಉಂಟಾಗಿದ್ದು ಇರುವುದಿಲ್ಲ. ನಾನು ಮನೆಯನ್ನು ಸರ್ವೇ ಗಡಿಯ ಮೇಲೆಯೇ ಕಟ್ಟಿದ್ದೇನೆ ಎಂದರೆ ಸರಿಯಲ್ಲ.

ನಾನು ಪಶ್ಚಿಮ ಗಡಿಯಲ್ಲಿ ಯಾವುದೇ ಸೆಟ್ ಬ್ಯಾಕ್ ಕ್ಷೇತ್ರವನ್ನು ಬಿಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ತಾನು ಮನೆಯನ್ನು ಕಟ್ಟಲು ಪಟ್ಟಣ ಪಂಚಾಯತಿಗೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಪಟ್ಟಣ ಪಂಚಾಯತ್ ರವರು ಸದರಿ ಸ್ಥಳಕ್ಕೆ ಬಂದು ಪರಿಶೀಲಿಸಿ ಅನುಮತಿಯನ್ನು ನೀಡಿದ್ದಾರೆ ಎಂದರೆ , ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ. ನಾನು ದಾವೆ ಹೂಡುವ ಕಾಲಕ್ಕೆ ಸದರಿ ವಿಷಯದ ಬಗ್ಗೆ ಪಟ್ಟಣ ಪಂಚಾಯತ್ ರವರನ್ನು ವಿಚಾರಿಸಿದ್ದು ಇರುವುದಿಲ್ಲ.

ಪ್ರತಿವಾದಿಯು ನಮ್ಮ ದಾವಾ ಸ್ಥಳವನ್ನು ಅತಿಕ್ರಮಣ ಮಾಡಿದ್ದು ಇರುವುದಿಲ್ಲ, ಹಾಗೂ ನಮ್ಮ ಜಾಗವನ್ನು ಅತಿಕ್ರಮಣ ಮಾಡಿ ಕಟ್ಟಡವನ್ನು ಕಟ್ಟಿದ್ದು ಇರುವುದಿಲ್ಲ. ಪ್ರತಿವಾದಿಯು ಕಟ್ಟಡ ಕಟ್ಟಿರುವುದರಿಂದ ನಮಗೆ ಯಾವುದೇ ತೊಂದರೆ ಇಲ್ಲ ಎಂದಾಗ , ಸಾಕ್ಷಿಯು ನೀರು ಬೀಳುತ್ತದೆ ಎಂಬುದಾಗಿ ನುಡಿದಿದ್ದಾರೆ. ನಾನು ನಮ್ಮ ವಕೀಲರ ಮುಂದೆ ದಾವೆ ಹೂಡುವ ಕಾಲಕ್ಕೆ ಪ್ರತಿವಾದಿಯ ಕಟ್ಟಡದಿಂದ ನೀರು ಬರುತ್ತಿದ್ದರಿಂದ ನನಗೆ ತೊಂದರೆ ಉಂಟಾಗುತ್ತದೆ ಎಂಬುದಾಗಿ ಹೇಳಿದ್ದೇನೆ , ಹಾಗೂ ಸದರಿ ವಿಷಯವನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿಯು ಸಹ ಹೇಳಿದ್ದೇನೆ. ಪ್ರತಿವಾದಿಯು ಕಟ್ಟಡವನ್ನು ಅವರ ಜಾಗದಲ್ಲಿ ಕಟ್ಟಿದ್ದು , ಅವರ ಮನೆ ಪೈಪನಿಂದ ನೀರು ಬರುತ್ತದೆ ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ. ಸದರಿ ಪೈಪ್ ನ್ನು ತೆರವು ಗೊಳಿಸುವಂತೆ ನಾವು ಪ್ರತಿವಾದಿಯರಿಗೆ ಹೇಳಿದ್ದು ಇರುವುದಿಲ್ಲ.

ದಾವೆ ಹೂಡುವ ಪೂರ್ವದಲ್ಲಿ ನನಗೆ ಎರಡು ನೋಟಿಸ್ಸಗಳು ಬಂದಿದ್ದವು ಎಂದರೆ ಸರಿ. ಮಾನ್ಯ ನ್ಯಾಯಾಲಯದಿಂದ ಕೇವಿಯಟ್ ನೋಟಿಸ್ಸಗಳು ಬಂದಿವೆ ಎಂದರೆ ಸರಿ. ಪ್ರತಿವಾದ ಪತ್ರದ ಪ್ಯಾರಾ ನಂಬರ 7 ರಲ್ಲಿ ಹೇಳಿರುವಂತಹ ವ್ಯಕ್ತಿ ನಾನೇ ಆಗಿದ್ದು, ಆ ವಿಳಾಸದಲ್ಲಿ ನಾನೇ ವಾಸವಾಗಿದ್ದೇನೆ , ಹಾಗೂ ಸದರಿ ವಿಳಾಸಕ್ಕೆ ಕೇವಿಯಟ್ ನೋಟಿಸ್ಸ ಬಂದಿರುತ್ತದೆ ಎಂದರೆ ಸರಿ. ಪ್ರತಿವಾದಿಯ ಕಟ್ಟಡದಿಂದ ನಮಗೆ ಗಾಳಿ ಬೆಳಕಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ.

ಪ್ರತಿವಾದಿಯು ಪಟ್ಟಣ ಪಂಚಾಯತಿಯ ಶರತ್ತುಗಳನ್ನು ಉಲ್ಲಂಘನೆ ಮಾಡಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ. ನಾನು ಪಟ್ಟಣ ಪಂಚಾಯತಿಯ ಸದರಿ ಶರತ್ತುಗಳನ್ನು ಓದಿ ನೋಡಿದ್ದು ಇರುವುದಿಲ್ಲ. ಪ್ರತಿವಾದಿಯರು ಪಟ್ಟಣ ಪಂಚಾಯತಿಯವರು ನೀಡಿದ ಶರತ್ತುಗಳ ಅನುಸಾರವಾಗಿಯೇ ಕಟ್ಟಡವನ್ನು ಕಟ್ಟಿದ್ದಾರೆ ಎಂದರೆ ಸರಿಯಲ್ಲ.

ಪ್ರತಿವಾದಿಯ ಕಟ್ಟಡದಿಂದ ನನಗೆ ಯಾವುದೇ ತೊಂದರೆ ಆಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ತನ್ನ ಹಳೆಯ ಮನೆ ಇದ್ದ ಕ್ಷೇತ್ರದಲ್ಲಿಯೇ ಹೊಸ ಮನೆಯನ್ನು ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನೇ ಶರತ್ತುಗಳನ್ನು ಮೀರಿ ಪಶ್ಚಿಮ ಗಡಿಯ ದಿಕ್ಕಿನಲ್ಲಿ ಕಟ್ಟಡವನ್ನು ಕಟ್ಟಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊ ನ್ನಾವರ.